**ಹೆಚ್ಚಿನ ದಕ್ಷತೆ, ಪಾರದರ್ಶಕತೆ ತುಂಬುವ ಶಿಕ್ಷಕರ ವರ್ಗಾವಣೆಯ ಹೊಸ ನೀತಿ**

-ಆರ್. ಪಾರ್ಥಸಾರಥಿ

ಶಿಕ್ಷಕ ವೃತ್ತಿಯು ಹೆಚ್ಚಿನ ಸಾಮಾಜಿಕ ಜವಾಬ್ದಾರಿಯನ್ನು ಹೊಂದಿರುವ ಬಹುಬೇಡಿಕೆಯ ವೃತ್ತಿಯಾಗಿದೆ. ಶಿಕ್ಷಕರು ತಮ್ಮ ವೃತ್ತಿಗೆ ನ್ಯಾಯ ಒದಗಿಸಬೇಕೆಂದರೆ ತಮ್ಮ ಗಮನಸೆಳೆಯುವ ಅನ್ಯ ಸಂಗತಿಗಳತ್ತ ವಿಚಲಿತರಾಗದೆ ತಮ್ಮ ಶಾಲೆ, ಮಕ್ಕಳು ಹಾಗು ಸಮುದಾಯಗಳ ಕಡೆ ಗಮನಹರಿಸಲು ಶಕ್ತರಾಗಬೇಕಾದ ಅಗತ್ಯವಿದೆ. ಶಿಕ್ಷಕರ ವರ್ಗಾವಣೆ ಎನ್ನುವುದು ಆ ರೀತಿಯ ಒಂದು ಕಾರ್ಯಭಂಗದ ಸಂಗತಿಯಾಗಿದೆ. ಶಿಕ್ಷಕರಿಗೆ ಸ್ಥಳದ ಆದ್ಯತೆಗಳಿರುತ್ತವೆ, ಅವನ್ನು ಶಾಲೆಗಳ ಅವಶ್ಯಕತೆಯ ಜೊತೆ ಸರಿದೂಗಿಸಬೇಕಿದೆ. ಆದರೂ, ಈ ವಿಷಯಗಳ ಬಗ್ಗೆ ಇರುವ ಮಾಹಿತಿ ವ್ಯವಸ್ಥಿತವಾಗಿ ಶಿಕ್ಷಕರಿಗೆ ದೊರಕುತ್ತಿಲ್ಲ. ಈ ಕಾರಣದಿಂದ, ಮಾಹಿತಿಯನ್ನು ಪಡೆಯುವ ಪ್ರಯತ್ನದಲ್ಲಿ ಶಿಕ್ಷಕರು ಗೊತ್ತು ಗುರಿ ಇಲ್ಲದೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಅಲೆದಾಡುವ ಹಾಗೆ ಆಗಿದೆ. ಮಾಹಿತಿ ಹೊಂದಿರುವವರಿಗೆ ಇದು ಅನವಶ್ಯಕ ಅಧಿಕಾರ ನೀಡುವ ಕಾರಣದಿಂದಾಗಿ ವಿದ್ಯಾರ್ಥಿಯ ಕಲಿಕೆಗೆ ಅನ್ಯಾಯವೆಸಗಿದಂತಾಗುತ್ತದೆ. ಈ ಎಲ್ಲಾ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯಲ್ಲಿ ಹೆಚ್ಚಿನ ಪಾರದರ್ಶಕತೆ ಹಾಗು ನ್ಯಾಯಸಮ್ಮತತೆ ತರಲು ಪುದುಚೇರಿ ಕೇಂದ್ರಾಡಳಿತ ಪ್ರದೇಶದ ಶಿಕ್ಷಣ ಇಲಾಖೆಯು ಶಿಕ್ಷಕರ ವರ್ಗಾವಣೆಯ ವಿಚಾರವಾಗಿ ಹೊಸ ನೀತಿಯೊಂದನ್ನು ಪರಿಚಯಿಸಿತು. ಈ ಲೇಖನವುಹಿಂದಿನ ವ್ಯವಸ್ಥೆಯಲ್ಲಿದ್ದ ವಿಚಾರಗಳು, ವರ್ಗಾವಣೆಯ ಸಂಪ್ರದಾಯಗಳು ಹಾಗು ಹೊಸ ನೀತಿಯಲ್ಲಿ ಪ್ರಸ್ತಾವಿಸಲ್ಪಟ್ಟ ಪ್ರಕ್ರಿಯೆಗಳು ಮತ್ತು ಇದರ ಮೊಟ್ಟಮೊದಲ ಅನಾವರಣವು ತಂದ ಅನುಭವದ ಬಗ್ಗೆಗಿನ ಪಕ್ಷಿನೋಟವನ್ನು ಒದಗಿಸುತ್ತದೆ.

1. ಹಿನ್ನೆಲೆ

ಪುದುಚೇರಿಯು ಕೇಂದ್ರಾಡಳಿತ ಪ್ರದೇಶವಾಗಿದ್ದು, ಪುದುಚೇರಿ, ಕರೈಕಲ್ (ತಮಿಳುನಾಡಿನಲ್ಲಿದೆ), ಯಾನಮ್ (ಆಂಧ್ರ ಪ್ರದೇಶದಲ್ಲಿದೆ) ಹಾಗು ಮಾಹೆ (ಕೇರಳದಲ್ಲಿದೆ) ಎಂಬ 4 ಪರಸ್ಪರ ಹೊಂದಿಕೊಂಡಂತೆ ಇರದ ಜಿಲ್ಲೆಗಳನ್ನು ಒಳಗೊಂಡಿದೆ. ಈ ಕೇಂದ್ರಾಡಳಿತ ಪ್ರದೇಶದಲ್ಲಿ ಎಲ್ಲ ಸೇರಿ ಒಟ್ಟು 419 ಶಾಲೆಗಳಿವೆ, ಅವುಗಳಲ್ಲಿ 277 ಶಾಲೆಗಳು ಪುದುಚೇರಿ ಜಿಲ್ಲೆಯಲ್ಲಿವೆ. 2.5 ಲಕ್ಷ ವಿದ್ಯಾರ್ಥಿಗಳ ಜನಸಂಖ್ಯೆಯಲ್ಲಿ ಶೇಕಡಾ 32ರಷ್ಟು ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಲ್ಲಿ ದಾಖಲಾಗಿದ್ದಾರೆ.

ಈ ಕೇಂದ್ರಾಡಳಿತ ಪ್ರದೇಶದಲ್ಲಿ ಶಿಕ್ಷಕರ 3 ಹಂತಗಳಿವೆ.• 1ರಿಂದ 5ನೇ ತರಗತಿಯವರೆಗೆ ಬೋಧಿಸುವ ಪ್ರಾಥಮಿಕ ಶಾಲಾ ಶಿಕ್ಷಕರು. ಅವರು 12ನೇ ತರಗತಿಯಲ್ಲಿ ತೇರ್ಗಡೆ ಹೊಂದಿರುವುದರ ಜೊತೆಗೆ ಶಿಕ್ಷಕರ ಶಿಕ್ಷಣದಲ್ಲಿ ಡಿಪ್ಲೊಮಾ ಪದವಿ ಹೊಂದಿರಬೇಕು. ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ (Teacher Eligibility Test -TET) ಕೂಡ ಉತ್ತೀರ್ಣರಾಗಿರಬೇಕು.

• ಮಾಧ್ಯಮಿಕ ಹಾಗು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬೋಧಿಸುವ ತರಬೇತಿ ಪಡೆದ ಪದವೀಧರ ಶಿಕ್ಷಕರು (• Trained Graduate Teachers -TGTs). ಅವರನ್ನು ಈ ಹುದ್ದೆಗೆ ಆಯ್ಕೆಯಾಗಲು ಒಂದು ಸ್ನಾತಕ ಪದವಿ ಹಾಗು ಬಿ.ಎಡ್. ಪದವಿ ಹೊಂದಿರಬೇಕು. ಇಲ್ಲಿನ 40 ಶೇಕಡಾ ಹುದ್ದೆಗಳಿಗೆ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಹಾಗು ತರಬೇತಿ ಪಡೆದ ಪದವೀಧರ ಶಿಕ್ಷಕರನ್ನು ಭಡ್ತಿ ನೀಡುವ ಮೂಲಕ ಭರ್ತಿ ಮಾಡಲಾಗುವುದು.

• ಪ್ರೌಢ ಶಿಕ್ಷಣದ ಹಂತಕ್ಕೆ ಬೋಧಿಸುವ ಉಪನ್ಯಾಸಕರು. ಒಂದು ಸ್ನಾತಕೋತ್ತರ ಪದವಿ ಹಾಗು ಬಿ.ಎಡ್. ಪದವಿ ಹೊಂದಿರುವವರು ಇದಕ್ಕೆ ಅರ್ಹರಾಗುತ್ತಾರೆ. ತರಬೇತಿ ಪಡೆದ ಪದವೀಧರ ಶಿಕ್ಷಕರನ್ನು ಉಪನ್ಯಾಸಕರಾಗಿ ಭಡ್ತಿ ನೀಡುವ ಮೂಲಕ ಇಲ್ಲಿನ 80 ಶೇಕಡ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

2. ಶಿಕ್ಷಕರ ವರ್ಗಾವಣೆ ಕ್ಷೇತ್ರದಲ್ಲಿ ಇತ್ತೀಚೆಗೆ ಎದುರಿಸಿದ ಕೆಲವು ತೊಡಕುಗಳು

ವಿದ್ಯಾರ್ಥಿಗಳ ದಾಖಲಾತಿ ಹಾಗು ಶಿಕ್ಷಕರ ವರ್ಗಾವಣೆಗಳ ನಡುವೆ ಹೊಂದಾಣಿಕೆಯಿಲ್ಲದಿರುವುದು:

ಕಳೆದ ಕೆಲವು ವರ್ಷಗಳಿಂದ ವಿದ್ಯಾರ್ಥಿಗಳು ಖಾಸಗಿ ಶಾಲೆಗಳಿಗೆ ವಲಸೆ ಹೋಗುತ್ತಿರುವುದರಿಂದ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿಯು ಇಳಿಮುಖವಾಗಿದೆ. ನಗರ ಪ್ರದೇಶಗಳಲ್ಲಿ ಈ ಇಳಿಕೆಯು ಬಹಳ ತೀವ್ರವಾಗಿದೆ. ಆದರೂ, ನಗರ ಪ್ರದೇಶಗಳಲ್ಲಿನ ಶಿಕ್ಷಕರ ಹುದ್ದೆಗಳಲ್ಲಿ ಇದಕ್ಕೆ ತಕ್ಕ ಪ್ರಮಾಣದ ಇಳಿಕೆಯೇನೂ ಕಂಡುಬರಲಿಲ್ಲ. ಅಗತ್ಯಕ್ಕಿಂತ ಹೆಚ್ಚಿನ ಶಿಕ್ಷಕರು ನಗರಪ್ರದೇಶಗಳಲ್ಲಿ ಲಭ್ಯವಿದ್ದರೂ ಗ್ರಾಮೀಣ ಪ್ರದೇಶದಲ್ಲಿ ಕಳಪೆ ಮಕ್ಕಳು-ಶಿಕ್ಷಕರ ಅನುಪಾತಗಳಿಗೆ ಇದು ಕಾರಣವಾಯಿತು. ದಾಖಲೆಗಳು ಹಳತಾದ ಕಾರಣದಿಂದ ಕೆಲವು ನಿದರ್ಶನಗಳಲ್ಲಿ ತೆರವಾಗಿರುವ ಶಿಕ್ಷಕರ ಹುದ್ದೆಗಳು ಸರಿಯಾಗಿ ಪ್ರತಿಬಿಂಬಿತವಾಗದೇ ಇರಬಹುದು. ಉದಾಹರಣೆಗೆ ನಿವೃತ್ತ / ರೋಗಪೀಡಿತ ಶಿಕ್ಷಕರು ದಾಖಲೆಗಳಲ್ಲಿ ಪ್ರತಿಬಿಂಬಿತರಾಗುವುದು ಮುಂದುವರಿಯಬಹುದು.• ಮೌಖಿಕ ಆದೇಶದಂತೆ ನಡೆಯುವ ವರ್ಗಾವಣೆಗಳ ಕಾರಣದಿಂದ ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಕರ ಕೊರತೆ:

ನಗರ ಪ್ರದೇಶಗಳಿಗೆ ಹಾಗು ಶಿಕ್ಷಕರ ಮನೆಗಳಿಗೆ ಹತ್ತಿರದ ಪ್ರದೇಶಗಳಿಗೆ ವರ್ಗಾವಣೆಗಾಗಿ ಹೆಚ್ಚು ಬೇಡಿಕೆಗಳು ಬಂದ ಪರಿಣಾಮವಾಗಿ ಅಧಿಕಾರಿಗಳಿಗೆ ಹಾಗು ರಾಜಕೀಯ ಮುಖಂಡರಿಗೆ 'ಮೌಖಿಕ ಆದೇಶ'ದ ಮೂಲಕ ವರ್ಗಾಯಿಸಲು ಹಲವಾರು ಕೋರಿಕೆಗಳು ಸಹಜವಾಗಿಯೇ ಬಂದವು. ಇದರ ಅನುಸಾರ, ಶಿಕ್ಷಕನು ಅಧಿಕೃತವಾಗಿ ಒಂದು ಶಾಲೆಗೆ ವರ್ಗವಾಗಿದ್ದರೂ ಮೌಖಿಕ ಆದೇಶದ ಮೇರೆಗೆ ಮತ್ತೊಂದು ಶಾಲೆಯಲ್ಲಿ ಕೆಲಸ ಮಾಡುತ್ತಿರುತ್ತಾರೆ. ಇದರಿಂದ ಒಂದು ಸಮಾನಾಂತರ ಶಿಕ್ಷಕರ ವರ್ಗಾವಣೆ ವ್ಯವಸ್ಥೆ ರಚನೆಯಾಗಲು ಕಾರಣವಾಗುತ್ತದೆ.

• ಶಿಕ್ಷಕರ ಉತ್ಸಾಹದ ಮೇಲೆ ಪ್ರಭಾವ:

ಶಿಕ್ಷಕರ ವಿತರಣೆಯ ವ್ಯವಸ್ಥೆಯಲ್ಲಿನ ಏರುಪೇರು ಹಾಗು ಅನೌಪಚಾರಿಕ ವ್ಯವಸ್ಥೆಯ ಕಾರಣಗಳಿಂದ ಶಿಕ್ಷಕನೊಬ್ಬ ಏಕಕಾಲಕ್ಕೆ 2-3 ತರಗತಿಗಳನ್ನು ನೋಡಿಕೊಳ್ಳುವಂತಹ ಪರಿಸ್ಥಿತಿಯನ್ನು ಎದುರಿಸಿದ್ದ ಹಲವು ಗ್ರಾಮೀಣ ಶಾಲೆಗಳಿದ್ದವು. ಕೆಲವು ದೂರದ ಪ್ರದೇಶಗಳಿಗೆ ಪ್ರಯಾಣ ಮಾಡಬೇಕಿದ್ದ ಶಿಕ್ಷಕರ ನಡುವೆ ನಿರುತ್ಸಾಹ ಮೂಡಲು ಇದು ಕಾರಣವಾಯಿತು ಕೂಡ; ಏಕೆಂದರೆ, ಅವರ ಸಹೋದ್ಯೋಗಿಗಳಲ್ಲಿ ಕೆಲವರು ವ್ಯವಸ್ಥೆಯನ್ನು ಪರಿಗಣಿಸದೆ, ಪರ್ಯಾಯ ಸುಲಭ ಮಾರ್ಗ ಕಂಡುಕೊಳ್ಳಲು ಸಾಧ್ಯವಾಗಿತ್ತು.• ದೀರ್ಘಕಾಲದ ರಜೆ:

ಶಿಕ್ಷಕರು ಒಂದು ವರ್ಷದಲ್ಲಿ ಹತ್ತು ದಿನಗಳ ಗಳಿಕೆ ರಜೆ ಹಾಗು ಎಂಟು ದಿನಗಳ ಸಾಮಾನ್ಯ ರಜೆ ಮತ್ತು 120 ದಿನಗಳ ಹೆರಿಗೆ ರಜೆ, ಇವುಗಳಲ್ಲದೆ ಅವರ ಸೇವಾ-ಅವಧಿಯಲ್ಲಿ ಎರಡು ವರ್ಷಗಳ ಕಾಲ ಮಗುವಿನ ಪೋಷಣೆಯ ರಜೆಗೆ ಸಹ ಅರ್ಹರಾಗಿರುತ್ತಾರೆ. ಈ ಕ್ರಮಗಳು ಶಿಕ್ಷಕರ ಕಲ್ಯಾಣಕ್ಕೆ ಹಾಗು ಅವರ ಕೌಟುಂಬಿಕ ಭದ್ರತೆಗೆ ಅವಶ್ಯವಾಗಿದ್ದರೂ ಬದಲಿ ಶಿಕ್ಷಕರನ್ನು ವ್ಯವಸ್ಥಿತವಾಗಿ ಹೊಂದಿಸಲು ಸಾಧ್ಯವಾಗದೆ, ಶಿಕ್ಷಕರು ಧೀರ್ಘಕಾಲದ ರಜೆ ಪಡೆದು ಗೈರುಹಾಜರಾಗುವುದು ಮಕ್ಕಳ ಕಲಿಕೆಯ ಮೇಲೆ ಪರಿಣಾಮ ಬೀರುತ್ತದೆ.

3. 2015-16ನೇ ಸಾಲಿನಲ್ಲಿ ಶಿಕ್ಷಕರ ವರ್ಗಾವಣೆಯ ಸುಧಾರಿತ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳಲಾಯಿತು

ಹುದ್ದೆಗಳ ವಿತರಣೆ:

ವಿದ್ಯಾರ್ಥಿ ದಾಖಲಾತಿಯ ಬಗ್ಗೆಗಿನ ಇತ್ತೀಚಿನ ಮಾಹಿತಿಯ ಆಧಾರದ ಮೇಲೆ ಶಿಕ್ಷಕ ಹುದ್ದೆಗಳ ವಿತರಣೆಯನ್ನು ವರ್ಗಾವಣೆ ನೀತಿಯಲ್ಲಿ ನಿಗದಿಪಡಿಸಿದ ನಿಯಮದ ಪ್ರಕಾರ ನಿರ್ಧರಿಸಲಾಯಿತು. ಹೆಚ್ಚಿನ ದಾಖಲಾತಿ ಹಾಗು ಶಿಕ್ಷಕರ ಕೊರತೆ ಇರುವ ಶಾಲೆಗಳಿಗೆ ಹೆಚ್ಚುವರಿ ಹುದ್ದೆಗಳನ್ನು ಮಂಜೂರು ಮಾಡಲಾಯಿತು. ಅದೇ ರೀತಿ, ದಾಖಲಾತಿ ಕುಸಿದ ಶಾಲೆಗಳಲ್ಲಿನ ಹುದ್ದೆಗಳ ಸಂಖ್ಯೆಯನ್ನು ಕಡಿತಗೊಳಿಸಲಾಯಿತು.

ದಾಖಲೆಗಳನ್ನು ಚೊಕ್ಕಗೊಳಿಸುವ ಪ್ರಕ್ರಿಯೆ:

ಶಿಕ್ಷಕರ ಬಗ್ಗೆಗಿನ ದತ್ತಸಂಚಯವನ್ನು (database) ಪರಿಷ್ಕರಿಸಲಾಯಿತು. ಖಾಲಿ ಇರುವ ಹುದ್ದೆಗಳ ಸಂಖ್ಯೆ ಹಾಗು ಶಿಕ್ಷಕರ ಸಂಖ್ಯೆಗಳನ್ನು ನಿಖರವಾಗಿ ಕಾಣುವಂತಾಗಲು ನಿವೃತ್ತ/ರೋಗಪೀಡಿತ ಶಿಕ್ಷಕರನ್ನು ಪಟ್ಟಿಯಿಂದ ಕೈಬಿಡಲಾಯಿತು.

ಪಾರದರ್ಶಕ ಆನ್‌ಲೈನ್ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ಹೊಚ್ಚ ಹೊಸತಾಗಿ ಪ್ರಾರಂಭಿಸಲಾಯಿತು:

ಅಕ್ಟೋಬರ್ 2015ರಿಂದ ಮೊದಲ್ಗೊಂಡ ಶಿಕ್ಷಕರ ವರ್ಗಾವಣೆಗೆ ಪಾರದರ್ಶಕ ಕೌನ್ಸೆಲಿಂಗ್ ಅನ್ನು ಆಧರಿಸಿದ ಪ್ರಕ್ರಿಯೆಯನ್ನು ಬಳಸಿಕೊಳ್ಳಲಾಯಿತು. ಎಲ್ಲ ಶಿಕ್ಷಕರಿಗೂ ನ್ಯಾಯಯುತವಾಗಿ ಅವಕಾಶಗಳು ದೊರಕುವ ಹಾಗೆ ನೋಡಿಕೊಳ್ಳಲು ಅವರ ಆಯ್ಕೆಯ ಪ್ರಕಾರ ಸ್ಥಳವನ್ನು ಆರಿಸುವುದಕ್ಕಾಗಿ ಎಲ್ಲಾ ಶಾಲೆಗಳಲ್ಲಿನ ವರ್ಗಾವಣೆ ಸಂಬಂಧಿತ ಸ್ಥಾನವನ್ನು 'ಶೂನ್ಯ' ಸ್ಥಿತಿಗೆ ತಂದು ವಿತರಣೆಯನ್ನು ಮತ್ತೊಮ್ಮೆ ಮೊದಲಿನಿಂದ ಮಾಡಲಾಯಿತು. ಶಿಕ್ಷಕರು ಸಲ್ಲಿಸಿದ ಸೇವೆಯ ಅವಧಿಯ ಆಧಾರದ ಮೇಲೆ ಶಾಲೆಗಳನ್ನು ಆಯ್ಕೆ ಮಾಡುವಂತೆ ಅವರನ್ನು ಆಹ್ವಾನಿಸಲಾಯಿತು. ಪ್ರತಿದಿನವೂ ಲಭ್ಯವಿರುವ ಸ್ಥಾನಗಳ ನವೀಕೃತ ಪಟ್ಟಿಯನ್ನು ತಯಾರಿಸಿ ಅದನ್ನು ಅಂತರ್ಜಾಲದಲ್ಲಿ ಲಗತ್ತಿಸಲಾಯಿತು. ಇದು ಶಿಕ್ಷಕರು ಸಲಹೆಗಾಗಿ ಬರುವ ಮೊದಲೇ ಅವರಿಗೆ ಇಷ್ಟವಾದ ಶಾಲೆಗಳಲ್ಲಿನ ಸ್ಥಾನಗಳ ಲಭ್ಯತೆಯನ್ನು ಪರಿಶೀಲಿಸಲು ಅನುವು ಮಾಡಿಕೊಟ್ಟಿತು.

ಹೊಸ ನೇಮಕಾತಿಗಳು ಮತ್ತು ತಾತ್ಕಾಲಿಕ ಶಿಕ್ಷಕರು:

ಪರಿಷ್ಕೃತ ವರ್ಗಾವಣೆ ಪ್ರಕ್ರಿಯೆಯ ಜೊತೆಗೆ 429 ಪ್ರಾಥಮಿಕ ಶಿಕ್ಷಕರನ್ನು, ಪ್ರತಿ ತರಗತಿಗೂ ಶಿಕ್ಷಕನೊಬ್ಬ ದೊರಕುವಂತೆ, ಹೊಸದಾಗಿ ನೇಮಿಸಲಾಯಿತು. ಹೆರಿಗೆ ರಜೆ ಅಥವಾ ಮಗುವಿನ ಪೋಷಣೆ ರಜೆಯಲ್ಲಿದ್ದ ಕಾರಣದಿಂದ ಖಾಲಿ ಇದ್ದ ಹುದ್ದೆಗಳಿಗೆ ಶಿಕ್ಷಕರನ್ನು ವರ್ಗಾಯಿಸುವುದರ ಮೂಲಕ ಶಿಕ್ಷಕರ ವಿತರಣೆ ನಡೆಯಿತು.

ಶಾಲೆಯನ್ನು ನಿಗದಿಪಡಿಸುವ ನಿಟ್ಟಿನಲ್ಲಿ ತೋರಿದ ನ್ಯಾಯಸಮ್ಮತತೆ ಹಾಗು ಅಧಿಕ ಪಾರದರ್ಶಕತೆಯಿಂದ ಶಿಕ್ಷಕರು, ಶಿಕ್ಷಕರ ಸಂಘಟನೆಗಳು ಹಾಗು ಸಿಬ್ಬಂದಿವರ್ಗದಿಂದ ಇಲಾಖೆಯು ಸಾಕಷ್ಟು ಸಕಾರಾತ್ಮಕ ಪ್ರತಿಕ್ರಿಯೆಯನ್ನು ಪಡೆಯಿತು. ಹಲವು ವರ್ಷಗಳಲ್ಲಿ ಇದೇ ಮೊಟ್ಟಮೊದಲ ಬಾರಿಗೆ ಹುದ್ದೆಗಳ ನೇಮಕಾತಿಗೆ ರಾಜಕೀಯ ಮುಖಂಡರು ಪ್ರಭಾವ ಬೀರಿದ ನಿದರ್ಶನಗಳು ಇಲ್ಲವೇ ಇಲ್ಲ ಎಂದು ಹೇಳಬಹುದಾಗಿದೆ.

4. ಕಾಲ ಕಳೆದಂತೆ ನೀತಿಯಲ್ಲಿ ಅನುಷ್ಠಾನಗೊಳ್ಳಬೇಕಿರುವ ಮತ್ತಷ್ಟು ಸುಧಾರಣೆಗಳು

ಈಗಾಗಲೇ ಅಂಗೀಕೃತವಾಗಿರುವ ಹೊಸ ಶಿಕ್ಷಕರ ವರ್ಗಾವಣೆ ನೀತಿಯಲ್ಲಿ ಇನ್ನೂ ಕೆಲವು ಸುಧಾರಣೆಗಳಾಗಬೇಕಿದೆ. ಅವು ಕಾಲ ಕಳೆದಂತೆ ಅನಾವರಣಗೊಳ್ಳುವುವು.

ಕೇಂದ್ರಾಡಳಿತ ಪ್ರದೇಶಗಳ ನಗರ, ಭಾಗಶಃ-ನಗರ ಹಾಗು ಗ್ರಾಮೀಣ ವಲಯಗಳಾಗಿ ವಿಂಗಡಣೆ:

ಗ್ರಾಮೀಣ ಹಾಗು ನಗರ ಪ್ರದೇಶಗಳಲ್ಲಿರುವ ಶಿಕ್ಷಕರ ವಿತರಣೆಯ ಪ್ರಕ್ರಿಯೆಯನ್ನು ನ್ಯಾಯಯುತವಾಗಿ ಸರಿದೂಗಿಸಲು ನಾಲ್ಕು ಜಿಲ್ಲೆಗಳಲ್ಲಿರುವ ಶಾಲೆಗಳನ್ನು ನಾಲ್ಕು ಬೇರೆ-ಬೇರೆ ವಲಯಗಳಾಗಿ ವಿಂಗಡಿಸಲಾಗಿದೆ. ಉದಾಹರಣೆಗೆ, ಪುದುಚೇರಿ ಜಿಲ್ಲೆಯಲ್ಲಿರುವ ಶಾಲೆಗಳನ್ನು ನಾಲ್ಕು ವಲಯಗಳಾಗಿ ವಿಂಗಡಿಸಲಾಯಿತು:

ವಲಯ 1 - ನಗರ

ವಲಯ 2 - ನಗರದ ಹೊರವಲಯ

ವಲಯ 3 - ಗ್ರಾಮೀಣ ಪ್ರದೇಶಗಳು

ವಲಯ 4 - ದೂರದ ಗ್ರಾಮೀಣ ಪ್ರದೇಶಗಳು

ಶಿಕ್ಷಕರು ತಮ್ಮ ಸೇವಾವಧಿಯ ಕನಿಷ್ಠ ಮೂರನೇ ಒಂದು ಭಾಗದಷ್ಟನ್ನು ಗ್ರಾಮೀಣ ಪ್ರದೇಶದಲ್ಲೇ ಕಳೆಯಬೇಕು. ಪುದುಚೇರಿ ಜಿಲ್ಲೆಯಲ್ಲಿ ಹೊಸದಾಗಿ ನೇಮಕಗೊಂಡ ಶಿಕ್ಷಕರನ್ನು ಮೊದಲು 4ನೇ ವಲಯಕ್ಕೆ ವರ್ಗಾಯಿಸಲಾಗುವುದು. ಆ ವಲಯದಲ್ಲಿ ನಾಲ್ಕು ವರ್ಷ ಪೂರ್ಣಗೊಳಿಸಿದ ನಂತರ ಅವರನ್ನು 3ನೇ ವಲಯಕ್ಕೆ ವರ್ಗಾಯಿಸಲಾಗುವುದು, ಇತ್ಯಾದಿ. 1ನೇ ವಲಯದಲ್ಲಿ ನಾಲ್ಕು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ನಂತರ ಅವರನ್ನು ಮತ್ತೆ 4ನೇ ವಲಯಕ್ಕೆ ವರ್ಗಾಯಿಸಲಾಗುವುದು. ಈ ಚಕ್ರ ಹೀಗೆಯೇ ಮುಂದುವರೆಯುವುದು. ಇದೇ ರೀತಿ ಶಿಕ್ಷಕರ ಬಡ್ತಿ ವಿಚಾರದಲ್ಲಿ ಕೂಡ ಶಿಕ್ಷಕರನ್ನು ಮೊದಲು 4ನೇ ವಲಯಕ್ಕೆ ವರ್ಗಾಯಿಸಲಾಗುವುದು; ನಾಲ್ಕು ವರ್ಷಗಳ ಸೇವೆಯ ನಂತರ ಅವರು 3ನೇ ವಲಯಕ್ಕೆ ವರ್ಗಾವಣೆ ಹೊಂದಲು ಅರ್ಹತೆ ಪಡೆಯುತ್ತಾರೆ, ಇತ್ಯಾದಿ.

ಮೂರು ವರ್ಷ ಅಥವಾ ಅದಕ್ಕಿಂತ ಕಡಿಮೆ ಸೇವಾವಧಿ ಉಳಿದಿರುವ ಶಿಕ್ಷಕರಿಗೆ, ವಿಶೇಷ ಸಾಮರ್ಥ್ಯವುಳ್ಳ ಶಿಕ್ಷಕರಿಗೆ, ಗಂಭೀರ ಕಾಯಿಲೆಗಳಿಂದ ನರಳುತ್ತಿರುವ ಶಿಕ್ಷಕರಿಗೆ ಹಾಗು ಅರ್ಹ ವಲಯಗಳಿಗೆ ವರ್ಗಾವಣೆ ಹೊಂದಲು ಹುದ್ದೆಗಳು ದೊರಕದೆ ಇದ್ದ ಸನ್ನಿವೇಶಗಳಲ್ಲಿ ಶಿಕ್ಷಕರಿಗೆ ವಿನಾಯಿತಿ ದೊರೆಯುವ ಹಾಗೆ ನೋಡಿಕೊಳ್ಳಲಾಗುತ್ತಿದೆ.

• ವರ್ಗಾವಣೆ ವೃತ್ತವನ್ನು ಕ್ರಮಬದ್ಧಗೊಳಿಸುವುದು; ಪರಸ್ಪರ ಹೊಂದಾಣಿಕೆಯ ವರ್ಗಾವಣೆಗಿರುವ ಮಿತಿಗಳನ್ನು ಹಾಗು ಕಚೇರಿ ಆದೇಶಗಳನ್ನು ಕ್ರಮಬದ್ಧಗೊಳಿಸುವುದು:

ಶಾಲೆಯ ವಾರ್ಷಿಕ ಕಾರ್ಯಕ್ರಮಗಳಿಗೆ ಅಡಚಣೆಗಳಾಗುವುದನ್ನು ತಪ್ಪಿಸಲು ಎಲ್ಲಾ ವರ್ಗಾವಣೆಗಳನ್ನು ಮೇ ತಿಂಗಳಿನಲ್ಲಿ ಮಾಡಲಾಗುವುದು. ಮೌಖಿಕ ಆದೇಶದ ಮೇಲೆ ಯಾವುದೇ ವರ್ಗಾವಣೆ ಮಾಡಲಾಗುವುದಿಲ್ಲ.

ಹೊಸದಾಗಿ ನೇಮಕಗೊಂಡ ಶಿಕ್ಷಕರಿಗೆ ಅರ್ಹತಾ ಪರೀಕ್ಷಣೆಯ ಅವಧಿಯಲ್ಲಿ ಅಥವಾ ಮೊದಲ ವರ್ಷದ ಸೇವಾವಧಿಯಲ್ಲಿರುವ ಬೇರೆ ಶಿಕ್ಷಕರಿಗೆ ಪರಸ್ಪರ ವರ್ಗಾವಣೆಗೆ ಅನುಮತಿ ನೀಡಲಾಗುವುದಿಲ್ಲ. ಪುದುಚೇರಿ ಜಿಲ್ಲೆಯಲ್ಲಿರುವ 3 ಮತ್ತು 4ನೇ ವಲಯಗಳಿಗೆ ಮಾತ್ರ ಪರಸ್ಪರ ವರ್ಗಾವಣೆಗೆ ಅನುಮತಿ ನೀಡಲಾಗುವುದು. ಓರ್ವ ಶಿಕ್ಷಕ/ಕಿ ತಮ್ಮ ಒಟ್ಟು ಸೇವಾವಧಿಯ ಕಾಲದಲ್ಲಿ ಗರಿಷ್ಠ ಎಂದರೆ ಎರಡು ಬಾರಿ ಪರಸ್ಪರ ವರ್ಗಾವಣೆಯನ್ನು ಕೋರಬಹುದು.

• ವರ್ಗಾವಣೆಗೆ ಪರಿಗಣಿಸಬೇಕಾದ ಅರ್ಹತಾ ಮಾನದಂಡಗಳು:

ಮುಂದೆ ಭವಿಷ್ಯದಲ್ಲಿ, ಶಿಕ್ಷಕರನ್ನು ಕೌನ್ಸೆಲಿಂಗ್‌ಗೆ ಅವರು ಗಳಿಸುವ 'ಅರ್ಹತಾ-ಅಂಕಿ'ಗಳ (entitlement points) ಆಧಾರದ ಮೇಲೆ ಆಹ್ವಾನಿಸಲಾಗುವುದು. ಶಿಕ್ಷಕರ ಸೇವಾವಧಿ, ಶೈಕ್ಷಣಿಕ ಸಾಧನೆ ಹಾಗು ಪಠ್ಯೇತರ ಸೇವೆಗಳನ್ನು ಅವಲಂಬಿಸಿ ಶಿಕ್ಷಕರು ಈ ಅಂಕಿಗಳನ್ನು ಗಳಿಸುತ್ತಾರೆ. ಪ್ರತಿ ವಿಭಾಗದಲ್ಲಿ ಪರಿಗಣಿಸಬೇಕಾದ ಮಾನದಂಡಗಳ ಕೆಲವು ವಿವರಣಾತ್ಮಕ ಅಂಶಗಳನ್ನು ಕೆಳಗೆ ನೀಡಲಾಗಿದೆ.

ಸಾಧನೆಯ ಮಾನದಂಡ

o ವಿದ್ಯಾರ್ಥಿಗಳು 10ನೇ ಹಾಗು 12ನೇ ತರಗತಿಯಲ್ಲಿ ಮಾಡುವ ಸಾಧನೆ, 6-9ರ ಶಾಲಾ ಪರೀಕ್ಷೆಗಳಲ್ಲಿ ಪ್ರತಿ ತರಗತಿಯ ಸರಾಸರಿ ಅಂಕಗಳು.

o ಶಾಲೆ ಬಿಟ್ಟ ಮಕ್ಕಳ ಮರು ದಾಖಲಾತಿ (ಪ್ರಾಥಮಿಕ ಶಾಲಾ ಶಿಕ್ಷಕರಿಗೆ)

o ``ರಾಷ್ಟ್ರೀಯ ಪ್ರತಿಭಾನ್ವೇಷಣೆ-ನವೋದಯ ಪ್ರವೇಶ ಪರೀಕ್ಷೆ''ಯಲ್ಲಿನ ಸಾಧನೆ (ಪ್ರಾಥಮಿಕ ಶಾಲಾ ಶಿಕ್ಷಕರಿಗೆ)

ಪಠ್ಯೇತರ ಚಟುವಟಿಕೆಗಳು

o ೀಎನ್‌ಸಿಸಿ (National Cadet Corp), ರಾಷ್ಟ್ರೀಯ ಸೇವಾಯೋಜನೆ (National Service Scheme), ಕೇಂದ್ರೀಯ ಸೇವಾಯೋಜನೆ (Central Service Scheme), ರಾಷ್ಟ್ರೀಯ ಹಸಿರು-ದಳದಂತಹ ಸಹ-ಪಠ್ಯ ಚಟುವಟಿಕೆಗಳು

o ರಾಜ್ಯ ಹಾಗು ರಾಷ್ಟ್ರ ಮಟ್ಟದ ವಿಜ್ಞಾನ ಪ್ರದರ್ಶನಗಳಲ್ಲಿ ಹಾಗು ವಿಚಾರಗೋಷ್ಠಿಗಳಲ್ಲಿ ಭಾಗವಹಿಸಲು ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು.

o ಸಂಶೋಧನಾ ಲೇಖನಗಳ ಪ್ರಸ್ತುತಿ.

ಸೇವಾವಧಿ

- ಪ್ರತಿ ವರ್ಷದ ಸೇವೆಗೆ ಅಂಕಿಗಳು
- ತಮ್ಮ ಸ್ವಂತ ಪ್ರದೇಶ ಬಿಟ್ಟು ಬೇರೆ ಪ್ರದೇಶದಲ್ಲಿ ಸೇವೆ ಸಲ್ಲಿಸಿದವರಿಗೆ ಹೆಚ್ಚುವರಿ ಅಂಕಗಳು.

ಶಾಲಾ ಮುಖ್ಯಸ್ಥರಿಗೆ, ತಾಂತ್ರಿಕ ಹಾಗು ವಿಶೇಷ ಶಿಕ್ಷಕರಿಗೆ ಇದೇ ರೀತಿಯ ಅರ್ಹತಾ ಮಾನದಂಡಗಳನ್ನು ರೂಪಿಸಲಾಗಿದೆ.

5. ಇನ್ನೂ ಗಮನಹರಿಸಬೇಕಿರುವ ನ್ಯೂನತೆಗಳು

ಸಾಧನೆಯ ಮಾನದಂಡಗಳು:

ಶಿಕ್ಷಕರು ಅವರ ಅರ್ಹತಾ-ಅಂಕಿಗಳನ್ನು ಪಡೆಯುವುದು ಆರಂಭಿಕ ಹೆಜ್ಜೆ. ಶಿಕ್ಷಕರ ಸಾಧನೆಯನ್ನು ಇನ್ನೂ ಹೆಚ್ಚು ವ್ಯಾಪಕವಾಗಿ ಪರಿಗಣಿಸಲು ವ್ಯವಸ್ಥೆಯನ್ನು ಪರಿಷ್ಕರಿಸುವ ಅಗತ್ಯವಿದೆ. ವಿವಿಧ ಶಾಲೆಗಳು ಎದುರಿಸುವ ವಿಭಿನ್ನ ಸ್ತರದ ಸಾಮಾಜಿಕ ಪ್ರತಿಕೂಲ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ನಿರುಪಾಧಿಕ ಸುಧಾರಣೆಯ ಕ್ರಮಗಳಿಗಿಂತ (absolute measures) ಸಾಪೇಕ್ಷ ಸುಧಾರಣೆಯ ಕ್ರಮಗಳನ್ನು (relative measures of improvement) ರೂಪಿಸುವ ಅಗತ್ಯವಿದೆ. • ಮಾಧ್ಯಮಿಕ ಹಾಗು ಪ್ರೌಢ ಶಾಲಾ ಶಿಕ್ಷಕರ ವಿಷಯಜ್ಞಾನ:

ಸೇವಾವಧಿ ಆಧಾರದ ಮೇಲೆ ಪ್ರಾಥಮಿಕ ಶಿಕ್ಷಕರನ್ನು ಸಹಜವಾಗಿಯೇ ಮಾಧ್ಯಮಿಕ ಶಾಲಾ ಶಿಕ್ಷಕರಾಗಿ ಬಡ್ತಿ ಪಡೆಯುವ ಹಾಗೆ ಮಾಡುವುದು ಆರೋಗ್ಯಕರ ಕ್ರಮವಲ್ಲ. ಅವರಿಗೆ ಮಾಧ್ಯಮಿಕ ಹಾಗು ಪ್ರೌಢ ಶಾಲೆಯ ಮಟ್ಟಕ್ಕೆ ಬೋಧಿಸಲು ಸಾಕಾಗುವಷ್ಟು ವಿಷಯಜ್ಞಾನ ಇಲ್ಲದಿರಬಹುದು. ಪ್ರಾಥಮಿಕ ಶಾಲೆಯ ಶಿಕ್ಷಕರನ್ನು ಮಾಧ್ಯಮಿಕ ಶಾಲೆ/ಪ್ರೌಢ ಶಾಲೆಯ ಶಿಕ್ಷಕರ ಸ್ಥಾನಕ್ಕೇರಿಸಲು ಅರ್ಹತಾ ಪರೀಕ್ಷೆ ಅನಿವಾರ್ಯ.

• ಪ್ರಾಥಮಿಕ ಶಾಲೆಯ ಶಿಕ್ಷಕರ ಬೆಳವಣಿಗೆಗಾಗಿ ಪರ್ಯಾಯ ಆಯ್ಕೆಗಳು:

ತರಬೇತಿ ಪಡೆದ ಪದವೀಧರ ಶಿಕ್ಷಕರಾಗಿ ಉನ್ನತ ಸ್ಥಾನಕ್ಕೇರುವುದೇ ಪ್ರಾಥಮಿಕ ಶಿಕ್ಷಕರಿಗೆ ಏಕಮಾತ್ರ ಆಯ್ಕೆಯಾಗಿರಬಾರದು. ಪರ್ಯಾಯ ಬೆಳವಣಿಗೆಯ ಪಥಗಳು ಕೂಡ ಇರಬೇಕು - ದಕ್ಷ ಶಿಕ್ಷಕರು, ಈಗ ಚಾಲ್ತಿಯಲ್ಲಿರುವ ಸ್ಥಾನಗಳಾದ ಶಾಲಾ ಮುಖ್ಯಸ್ಥರು/ಪ್ರೌಢಶಾಲಾ ಶಿಕ್ಷಕರು ಜೊತೆಗೆ ಕ್ಲಸ್ಟರ್/ಬ್ಲಾಕ್ ಸಂಪನ್ಮೂಲ

ವ್ಯಕ್ತಿಗಳು, ಇತ್ಯಾದಿ. ಇದು ಶಿಕ್ಷಕರಿಗೆ ಅವರ ಸಾಮರ್ಥ್ಯವು ಉತ್ತಮತರವಾಗಿ ಬಳಕೆಯಾಗುವ ಸ್ಥಾನಗಳಿಗೆ ನೇಮಕಗೊಳ್ಳಲು ಅನುವು ಮಾಡಿಕೊಡುತ್ತದೆ. ಶಿಕ್ಷಕರು ತಮಗೆ ಸೂಕ್ತವಲ್ಲದ ಸ್ಥಾನಕ್ಕೆ ನೇಮಕಗೊಳ್ಳುವ ಬದಲು ಪ್ರಾಥಮಿಕ ಶಾಲಾ ಶಿಕ್ಷಕ ಸ್ಥಾನದಲ್ಲೇ ಮುಂದುವರೆಯುವ ಆಯ್ಕೆ ಕೂಡ ಶಿಕ್ಷಕರಿಗೆ ಲಭ್ಯವಿರಬಹುದು. ಸ್ಥಾನದ ಅವಶ್ಯಕತೆಯ ಪೂರೈಕೆಯಲ್ಲಿ ರಾಜಿ ಮಾಡಿಕೊಳ್ಳದೆ ಶಿಕ್ಷಕರ ಸೇವಾವಧಿಗೆ ಅನುಗುಣವಾಗಿ ಅವರಿಗೆ ದೊರೆಯಬೇಕಾದ ಪರಿಹಾರ ಧನವೂ ಬೆಳೆಯುವಂತೆ ನೋಡಿಕೊಳ್ಳಬಹುದು.

• ಪ್ರೌಢಶಾಲೆಗೆ ವರ್ಗಾವಣೆಗೊಳ್ಳುವುದನ್ನು ತಪ್ಪಿಸಿಕೊಳ್ಳುವುದು:

ಈ ಪ್ರಕ್ರಿಯೆಯಲ್ಲಿ, ಹಲವಾರು ಹಿರಿಯ ಶಿಕ್ಷಕರು ಸಾರ್ವಜನಿಕ ಪರೀಕ್ಷೆಯ ಒತ್ತಡವನ್ನು ನಿವಾರಿಸಿಕೊಳ್ಳಲು ಪ್ರೌಢಶಾಲೆಗೆ ವರ್ಗಾವಣೆಗೊಳ್ಳುವುದನ್ನು ತಪ್ಪಿಸಿಕೊಂಡು ಮಾಧ್ಯಮಿಕ ಶಾಲೆಗಳನ್ನೇ ಆಯ್ಕೆ ಮಾಡಿಕೊಂಡರು. ಮಾಧ್ಯಮಿಕ ಶಾಲೆಯವರೆಗೆ ಕಳಪೆ ಶೈಕ್ಷಣಿಕ ಮಟ್ಟದ ಆಧಾರದ ಮೇಲೆ ಮಕ್ಕಳನ್ನು ಅದೇ ತರಗತಿಯಲ್ಲಿ ಉಳಿಸಿಕೊಳ್ಳಬಾರದೆಂಬ ನಿಯಮವಿರುವುದರಿಂದ, ಶಿಕ್ಷಕರು ಹೊಣೆಗಾರರಾಗಬೇಕಿಲ್ಲ. ಇದು ವಿದ್ಯಾರ್ಥಿಗಳಿಗೆ ಅಪಚಾರ ಎಸಗುತ್ತದೆ. ಮುಂದೊಂದು ದಿನ ಸಾಧನೆಯ ಮಾನದಂಡಗಳನ್ನು ಬಿಗಿಮಾಡುವುದರಿಂದ ಹಾಗು ಪ್ರೌಢಶಾಲೆಯಲ್ಲಿ ಕನಿಷ್ಠ ಸೇವಾವಧಿಯನ್ನು ನಿಗದಿಪಡಿಸುವುದರಿಂದ ಈ ಸನ್ನಿವೇಶವನ್ನು ಸಂಭಾಳಿಸಬಹುದು.

ಹೊಸ ಶಿಕ್ಷಕರ ವರ್ಗಾವಣೆ ನೀತಿಯಲ್ಲಿ ಹೆಚ್ಚಿನ ಪಾರದರ್ಶಕತೆ ಇದೆ. ಮೇಲೆ ವಿವರಿಸಿರುವ ಕೆಲವು ಕ್ರಮಗಳಿಂದ ಎಲ್ಲಾ ಮಕ್ಕಳಿಗೂ ಗುಣಮಟ್ಟದ ಶಿಕ್ಷಣವನ್ನು ನೀಡುವ ದಿಕ್ಕಿನಲ್ಲಿ ಮುನ್ನಡೆಯಲು ನಮಗೆ ಸಾಧ್ಯವಾಗಬೇಕು.

ವರ್ಗಾವಣೆ ನೀತಿಯ ಪೂರ್ಣ ಪಾಠವನ್ನು ಪುದುಚೇರಿ ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿ ಪಡೆಯಬಹುದು. ಅದರ ಕೊಂಡಿಯನ್ನು ಇಲ್ಲಿಕೊಡಲಾಗಿದೆ.http://schooledn.puducherry.gov.in/HTML/CircuTenders/circular2015/TeachTransferPolicy.pdf

ಆರ್.ಪಾರ್ಥಸಾರಥಿ ಅವರು ಪುದುಚೇರಿ ಸರ್ಕಾರದ ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕರು. ಪ್ರಾಣಿಶಾಸ್ತ್ರ ಮತ್ತು ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಪ್ರಸ್ತುತ ಅವರು 'ಸಕ್ರಿಯ ಕಲಿಕೆ' (Active learning) ವಿಷಯದಲ್ಲಿ ಸಂಶೋಧನೆಯನ್ನು ನಡೆಸುತ್ತಿದ್ದಾರೆ. 20 ವರ್ಷಗಳ ಬೋಧನಾನುಭವ ಮತ್ತು 14 ವರ್ಷಗಳ ಆಡಳಿತಾತ್ಮಕ ಅನುಭವವನ್ನು ಹೊಂದಿರುವ ಪಾರ್ಥಸಾರಥಿ

ಅವರು 6 ವರ್ಷ ಪುದುಚೇರಿಯಲ್ಲಿ ಸ್ಟೇಟ್ ಪ್ರಾಜೆಕ್ಟ್ ಡೈರೆಕ್ಟರ್ ಆಗಿ ಕಾರ್ಯನಿರ್ವಹಿಸಿದ್ದಾರೆ. ಶೈಕ್ಷಣಿಕ ಆಡಳಿತ ಕ್ಷೇತ್ರದಲ್ಲಿ ಕಂಪ್ಯೂಟರ್ ಮತ್ತು ಅಪ್ಲಿಕೇಶನ್ ಬಳಕೆಯಲ್ಲಿ ತಜ್ಞರು. ಪುದುಚೇರಿಯಲ್ಲಿ ಕೌನ್ಸೆಲಿಂಗ್ ಆಧಾರಿತ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯ ಜಾರಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಅವರನ್ನು parthamanasa@yahoo.co.in ಮೂಲಕ ಸಂಪರ್ಕಿಸಬಹುದು.

ಅನುವಾದ : ಕುಶಲ್

ಪರಿಶೀಲನೆ : ಚಂದ್ರಶೇಖರ್ ಮಂಡೆಕೋಲು